ಉ) ಸುಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳಿಗೆ ಬದಲಾಗಿ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವ ಸಲುವಾಗಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯ ವಿಭಾಗ/ಉಪ ವಿಭಾಗ ಮಟ್ಟದಲ್ಲಿ 22 ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ.

ಅಲ್ಲದೇ, ಪ್ರಸ್ತುತ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ 33 ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುತ್ತವೆ ಮತ್ತು ಬೆಳಗಾವಿ ಮತ್ತು ಹುಬ್ಬಳ್ಳಿ ನಗರಗಳಲ್ಲಿ 2 ಬೃಹತ್ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಅಲ್ಲದೇ, 5 ಹೊಸ ದುರಸ್ತೀ ಕೇಂದ್ರಗಳ ಸ್ಥಾಪನೆಗೆ ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.

ಚಿಕ್ಕೋಡಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯಡಿ ಸಿ.ಆರ್.ಎಫ್. ಅನುದಾನದಡಿ ರಸ್ತೆಗಳು

1822 (1894); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್.) ಅನುದಾನದಲ್ಲಿ ದಿನಾಂಕ: 01.01.2013 ರಿಂದ ದಿನಾಂಕ: 31.12.2014ರ ಅವಧಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳು ಯಾವುವು; ಅವುಗಳ ಉದ್ದಳತೆ, ರಸ್ತೆಯ ಹೆಸರು, ಯಾವ ಗ್ರಾಮಗಳ ಮೂಲಕ ರಸ್ತೆಗಳು ಹಾಯುವುದು ಎಷ್ಟೆಷ್ಟು ಕಿ.ಮೀ. ಗಳಲ್ಲಿ ಸುಧಾರಣೆ ಕೈಗೊಳ್ಳುವುದು, ಅಂದಾಜು ಮೊತ್ತ ಎಷ್ಟು, ಗುತ್ತಿಗೆ ಪಡೆದ ಗುತ್ತಿಗೆದಾರರು ಯಾರು, ಗುತ್ತಿಗೆ ಪ್ರಕ್ರಿಯೆ ಯಾವಾಗ ಆಗಿರುತ್ತದೆ, ಕಾಮಗಾರಿಯು ಸಂಪೂರ್ಣಗೊಳ್ಳಬೇಕಾದ ದಿನಾಂಕ ಯಾವುದು, ಈವರೆಗೆ ಕಾಮಗಾರಿಗಳನ್ನು ಆರಂಭಿಸದಿರಲು ಕಾರಣ ಏನು, ಪ್ರಸ್ತುತ ಕಾಮಗಾರಿಯ ಹಂತವೇನು; (ಕಾಮಗಾರಿವಾರು ವಿವರ ನೀಡುವುದು)

ಆ) ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಸಂಖ್ಯೆ 98 (ಭಾಟನಾಂಗನೂರ–ಬೋರಗಾಂವವಾಡಿ) ಹದಗೆಟ್ಟಿದ್ದು, ದಿನಂಪ್ರತಿ ಪ್ರಯಾಣಿಕರು, ರೈತ ಬಾಂಧವರು, ನರಕಯಾತನೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಂಡಿದೆ;

ಇ) ನಿಪ್ಪಾಣಿ ಮತಕ್ಷೇತ್ರದ ರಾಜ್ಯ ಹೆದ್ದಾರಿ ಸಂಖ್ಯೆ 98 ರಲ್ಲಿನ ರಸ್ತೆಯ ಕಾಮಗಾರಿಯು ಇಲಾಖೆಯು ಸಿಆರ್ಎಫ್ ಯೋಜನೆಯಲ್ಲಿ ಮಂಜೂರಾಗಿದ್ದು, ಈವರೆಗೂ ಆರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ತಪ್ಪಿತಸ್ಥರು ಯಾರು, ಅವರ ಮೇಲೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ ಹಾಗೂ ಯಾವ ಕ್ರಮ ಕೈಗೊಳ್ಳುವುದು;

ಈ) ಸದರಿ ರಸ್ತೆಯ ಪರಿಸ್ಥಿತಿಗೆ ಅನುಗುಣವಾಗಿ ಈಗ ಮಂಜೂರಾಗಿರುವ ಅನುದಾನವು ಕಡಿಮೆಯಾಗಿದ್ದು, ಹೆಚ್ಚುವರಿ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡುವುದೇ, ಮಾಡುವುದಾದಲ್ಲಿ ಯಾವಾಗ ಮಾಡುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ವಿವರಗಳನ್ನು **ಅನುಬಂಧ–1** ರಲ್ಲಿ ನೀಡಿದೆ.

ಆ) 2013–14 ಮತ್ತು 2014–15ನೇ ಸಾಲಿನಲ್ಲಿ, ಚಿಕ್ಕೋಡಿ ವಿಭಾಗದ ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಹೆ–98 (ಭಾಟನಾಗನೂರ–ಬೋರಗಾಂವಾಡಿ) ರಸ್ತೆಯ ಅಭಿವೃದ್ಧಿಪಡಿಸಿರುವ ವಿವರಗಳನ್ನು **ಅನುಬಂಧ–2** ರಲ್ಲಿ ನೀಡಿದೆ. ಲೆಕ್ಕ ಶೀರ್ಷಿಕೆ 3054 ರಾಹೆ (ಯೋಜನೇತರ) ನಿರ್ವಹಣೆ ಅಡಿಯಲ್ಲಿ ಚಿಕ್ಕೋಡಿ ತಾಲ್ಲೂಕಿನ ಭಾಟನಾಗನೂರ ರಸ್ತೆ ರಾಹೆ–98 ರ ಕಿಮೀ 0.00 ರಿಂದ 4.00 ಚೈನೇಜ್ 7.50 ರಿಂದ 8.20, ಚೈನೇಜ್ 13.20 ರಿಂದ 20.60, ಚೈನೇಜ್ 27.40 ರಿಂದ 38.10 ರವರೆಗೆ ₹ 20.20 ಲಕ್ಷ

ಅನುದಾನದಲ್ಲಿ ಸದರಿ ರಸ್ತೆ ನಿರ್ವಹಣೆ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಇ) ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸೌಂದಲಗಾದಿಂದ ಮಂಗೂರು ವರೆಗಿನ Via ಚಿನ್ನಾಡಿ ರಸ್ತೆ ಸುಧಾರಣೆ ಕಾಮಗಾರಿಯು 2013–14 ನೇ ಸಾಲಿನ ಸಿ.ಆರ್.ಎಫ್. ಅನುದಾನದಡಿ ₹ 300.00 ಲಕ್ಷಗಳಿಗೆ ಮಂಜೂರು ಆಗಿದ್ದು, ಸದರಿ ಕಾಮಗಾರಿಯನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು, ಕಿ.ಮೀ. 8.50 ರಿಂದ 10.50 ರ ವರೆಗಿನ 2.00 ಕಿ.ಮೀ. ರಸ್ತೆ ಸುಧಾರಣೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಈ) ಮೇಲೆ ತಿಳಿಸಿದಂತೆ ಸಿ.ಆರ್.ಎಫ್. ಅಡಿಯಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ; ಹಾಗೂ ರಾಜ್ಯ ಹೆದ್ದಾರಿಗಳ ನಿರ್ವಹಣೆಗೆ ಮೀಸಲಿರಿಸಿದ ಅನುದಾನದಲ್ಲಿ ರಸ್ತೆಯನ್ನು ನಿರ್ವಹಿಸಿ ಸುಗಮ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗಿದೆ.

ಪ್ರಶ್ನೆ ಸಂಖ್ಯೆ 1894

ಅನುಬಂಧ-I

ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ ವಿಭಾಗ ಯಬ್ಬಳ್ಳಿಯ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್) ಅನುದಾನದಲ್ಲಿ ದಿನಾಂಕ: 01.01.2013 ರಿಂದ ದಿನಾಂಕ: 31.12.2014ರ ಅವಧಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳ ವಿವರಗಳು

ಕ್ರ.ಸಂ.	ಕಾಮಗಾರಿಯ ಹೆಸರು	ರಸ್ತೆಯಿಂದ ವರೆಗೆ ಕಿ.ಮಿ	ರಸ್ತೆ ಸುಧಾರಣೆ ಉದ್ದ ಕಿ.ಮಿ.	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಗುತ್ತಿಗೆದಾರರ ಹೆಸರು	ಗುತ್ತಿಗೆ ಒಪ್ಪಂದಪತ್ರಿಕೆಯ ದಿನಾಂಕ	ಕಾಮಗಾರಿಯ ಮುಕ್ತಾಯ ದಿನಾಂಕ	ಷರಾ
1	ರಾಷ್ಟ್ರೀಯ ಹೆದ್ದಾರಿ-78ರ ಕೆಟ್ಟಹಳ್ಳಿ-ಇಚಲಕರಂಜಿ ರಸ್ತೆಯ ಕಿ.ಮಿ. 64 ರಿಂದ 79 ರವರೆಗಿನ ರಸ್ತೆ ಸುದಾರಣೆ ಕಾಮಗಾರಿ	64.00 ರಿಂದ 79.00	14.20	550.00	ಶ್ರೀ.ಪಿ.ಬಿ.ವಂಟಮುತ್ತೆ, ಒಂದನೇ ದರ್ಜೆ ಗುತ್ತಿಗೆದಾರರು, ಚಿಕ್ಕೋಡಿ	04.03.2014	03.02.2015	ಕಾಮಗಾರಿ ಮುಕ್ತಾಯ ಗೊಂಡಿರುತ್ತದೆ.
2	ನೇಗ್ ಸದಲಗಾ, ಬೋರಗಾಂವಿ ಕಂಸನಾಳದಿಂದ ಮಹಾರಾಷ್ಟ್ರ ಬಾರ್ಡರ್‌ರವರೆಗೆ ಕಿ.ಮಿ.11.20 ರಿಂದ 16.000ರಗರೆಗೆ ರಸ್ತೆ ಸುಧಾರಣೆ ಕಾಮಗಾರಿ	11.20 to 16.00	6.20	200.00	ಶ್ರೀ.ಪಿ.ಬಿ.ವಂಟಮುತ್ತೆ, ಒಂದನೇ ದರ್ಜೆ ಗುತ್ತಿಗೆದಾರರು, ಚಿಕ್ಕೋಡಿ	04.03.2014	03.02.2015	ಕಾಮಗಾರಿ ಮುಕ್ತಾಯ ಗೊಂಡಿರುತ್ತದೆ
3	ರಾಜ್ಯ ಹೆದ್ದಾರಿ-12 ರ ವಿಜಾಪುರ ಸಂಕೇಶ್ವರ ರಸ್ತೆಯ ಕಿ.ಮಿ. 140.00 to 150.00 ರವರೆಗಿನ (ರೂಪಿನಾಳ ಕ್ರಾಸ್ ಅಂಕಲಿ ಕೂಟ್) ರಸ್ತೆ ಸುಧಾರಣೆ ಕಾಮಗಾರಿ	140.00 to 150.00	10.60	400.00	ಶ್ರೀ.ಪಿ.ಬಿ.ವಂಟಮುತ್ತೆ, ಒಂದನೇ ದರ್ಜೆ ಗುತ್ತಿಗೆದಾರರು, ಚಿಕ್ಕೋಡಿ	04.03.2014	03.02.2015	ಕಾಮಗಾರಿ ಮುಕ್ತಾಯ ಗೊಂಡಿರುತ್ತದೆ

ತಕ್ಷೆ ಸಂಖ್ಯೆ 1894

ಅನುಬಂಧ-II

2013-14 ಮತ್ತು 2014-15ನೇ ಸಾಲಿನ ರೋಣ ಚಿಕ್ಕೋಡಿ ವಿಧಾನಸಭಾ ವಿಷ್ಣಾಗ ವ್ಯಾಪ್ತಿಯ ಬಾಗಲಕೋಟ ಜಿಲ್ಲೆಯಲ್ಲಿ ಬರುವ ರಾ.ಹೆ-98 (ಘಟಪ್ರಭಾ-ಗೋಕಾಕ-ಮೂಡಲಗಿ) ರಸ್ತೆಯ ಅಭಿವೃದ್ಧಿಪಡಿಸುವ ವಿವರ ಕೆಳಗಿನಂತಿವೆ.

ಕ್ರ ಸ	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಆಂದಾಜು ಮೊತ್ತ (ರೂ ಲಕ್ಷಗಳಲ್ಲಿ	ಶರಾ
1	2	3	4	5
		2013-14		
1	5054 ರಾ ಹೆ ಸುಧಾರಣೆ	ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ ಕಿಮೀ ನಂ 8.50 ರಿಂದ 9.20ನ ವರೆಗೆ (ಸೌಂದಲಗಾದಿಂದ ಅಡಿ ಕ್ರಾಸ್ ವರೆಗೆ) ಡಾಂಬರೀಕರಣ	20 00	ಕೆಲಸ ಮುಗಿದಿದೆ
2	5054 ರಾ ಹೆ ಸುಧಾರಣೆ	ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ ಕಿಮೀ ನಂ. 13.20 ರಿಂದ 20.00ನ ವರೆಗೆ (ಸೌಂದಲಗಾದಿಂದ ಕುನ್ನೂರ ವರೆಗೆ ಸುಧಾರಣೆ)	90.00	ಕೆಲಸ ಮುಗಿದಿದೆ
3	5054 ರಾ.ಹೆ ಸುಧಾರಣೆ	ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ ಕಿಮೀ ನಂ. 10.50 ರಿಂದ 13.20 ಮತ್ತು 40 10 ರಿಂದ 43.10ನ ವರೆಗೆ (ಸೌಂದಲಗಾದಿಂದ ಪಿ.ಎಸ್.ಸಿ ಸೆಂಟರ್ ದಿಂದ ಕುನ್ನೂರ ಸರ್ಕಲ್, ಮಾಂಗೂರದಿಂದ ಯಿಗೂಡ ಗಡಿಯವರೆಗೆ ಅಮೃತ ಭಾಗಗಳಲ್ಲಿ ಅಭಿವೃದ್ಧಿ)	78 12	ಕೆಲಸ ಮುಗಿದಿದೆ
4	5054 ರಾ.ಹೆ ನಿರ್ವಹಣೆ	ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ ಸುಧಾರಣೆ (ಕಿಮೀ ನಂ 35.50 ರಿಂದ 40.15)	164.08	ಕೆಲಸ ಮುಗಿದಿದೆ.
5	5054 ರಾ ಹೆ ಸೇತುವೆ	ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ (ರಾ.ಹೆ-98) ಕಿಮೀ 40 00 ರಲ್ಲಿ ಸೇತುವೆ ಸುಧಾರಣೆ	14 94	ಕೆಲಸ ಮುಗಿದಿದೆ
6	3054 13ನೇ ಹಣಕಾಸು	ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ (ರಾ.ಹೆ-98) ಕಿಮೀ ನಂ 12.75 ರಿಂದ 16 00 ರವರೆಗೆ ರಸ್ತೆ ಸುಧಾರಣೆ	37.50	ಕೆಲಸ ಮುಗಿದಿದೆ
		2014-15		
1	5054 ರಾ ಹೆ ಸುಧಾರಣೆ	ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ ಕಿಮೀ. ನಂ 25.50 ರಿಂದ 36.200 ವರೆಗೆ ರಸ್ತೆ ಅಗಲೀಕರಣ ಮತ್ತು ಸುಧಾರಣೆ (25.50 ರಿಂದ 27.50)	100 00	ಕೆಲಸ ಮುಗಿದಿದೆ
2	5054 ರಾ ಹೆ ನಿರ್ವಹಣೆ	ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ ರಾ.ಹೆ -98ರ ಕಿಮೀ ನಂ 0.00 ರಿಂದ 7.500ನ ವರೆಗೆ ರಸ್ತೆ ಅಗಲೀಕರಣ ಮಾಡಿ ಡಾಂಬರೀಕರಣ ಮಾಡುವುದು	150 00	ಕೆಲಸ ಮುಗಿದಿದೆ
3	3054 13ನೇ ಹಣಕಾಸು	ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ-ಮೂಡಲಗಿ ರಸ್ತೆ ರಾ.ಹೆ -98ರ ಕಿಮೀ ನಂ.4 00 ರಿಂದ 4 15ನ ವರೆಗೆ ರಸ್ತೆ ಅಗಲೀಕರಣ ಮಾಡಿ ಡಾಂಬರೀಕರಣ ಮಾಡುವುದು (ಸೊಲಿಗ್ರಾಮದ ಪರಿಮಿತಿಯಲ್ಲಿ)	10 00	ಕೆಲಸ ಮುಗಿದಿದೆ

ಲೆಕ್ಕ ಶೀರ್ಷಿಕೆ 3054 ರಾ ಹೆ (ಯೋಜನೇತರ) ನಿರ್ವಹಣೆ ಅಡಿಯಲ್ಲಿ ಚಿಕ್ಕೋಡಿ ತಾಲೂಕಿನ ಘಟಪ್ರಭಾ-ಗೋಕಾಕ ರಸ್ತೆ ರಾ ಹೆ-98ರ ಕಿಮೀ ನಂ 0 00 ರಿಂದ 4.00, ಕಿ.ಮೀ 7 50 ರಿಂದ 8 20, ಕಿ.ಮೀ 13 20 ರಿಂದ 20 60, ಕಿ.ಮೀ 27 40 ರಿಂದ 38 10 ವರೆಗೆ ರೂ 20.20 ಲಕ್ಷ ಅಂದಾಜಿನಲ್ಲಿ ಸದರಿ ರಸ್ತೆಯ ನಿರ್ವಹಣೆ ಮಾಡಿ ಸುಗಮ ಸಂಚಾರಕ್ಕೆ ಅನುವುಮಾಡಿ ಕೊಡಲಾಗುತ್ತಿದೆ